**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 3 ಸಿಡಬ್ಲು : 1

ಸಾಕ್ಷಿಯ ಹೆಸರು : ಪ್ರಭಾಕರ ಅಸುದೆ
ತಂದೆಯ ಹೆಸರು : ಪ್ರಕಾಶ ಅಸುದೆ
ವಯಸ್ಸು : 38 ವರ್ಷ
ಉದ್ಯೋಗ : ವ್ಯಾಪಾರ
ವಾಸ್ತವ್ಯ : ಮೊರಬ , ತಾಲೂಕು ರಾಯಬಾಗ
ದಿನಾಂಕ : 16-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ರಿಂದ ಚಾಸಾಃ 7 ರವರು ನನಗೆ ಪರಿಚಯ ಇರುತ್ತಾರೆ. ಚಾಸಾಃ 8 ದಿವಾಕರ ನನ್ನ ಅಣ್ಣ. 1 ರಿಂದ 11 ಆರೋಪಿತರು ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ನಾನು ಪರಿಶಿಷ್ಟ ಜಾತಿಯ ಹಿಂದೂ ಹೊಲೆರ ಜಾತಿಗೆ ಸೇರಿದ್ದೇನೆ. ಆರೋಪಿತರು ಲಿಂಗಾಯತ ಜಾತಿಗೆ ಸೇರಿದ್ದಾರೆ.

2. ನಾನು ಪಾನ್ ಶಾಪ ನಡೆಸುತ್ತೇನೆ. ಮೊರಬದಲ್ಲಿರುವ ಅಂಬೇಡ್ಕರ ವೃತ್ತದಲ್ಲಿ ನನ್ನ ಪಾನ್ ಶಾಪ ಇರುತ್ತದೆ. ನಾನು ನನ್ನ ಅಂಗಡಿಯನ್ನು ಬೆಳಗ್ಗೆ 08.00 ಗಂಟೆಯಿಂದ ರಾತ್ರಿ 09.30 ಗಂಟೆಯವರೆಗೆ ತೆರೆದಿರುತ್ತೇನೆ.

3. ದಿನಾಂಕಃ 01-10-2015 ರಂದು ಬೆಳಗ್ಗೆ 11:00 ಗಂಟೆ ಸಮಯಕ್ಕೆ ಅಣ್ಣಪ್ಪ ಹಳಿಜೋಳ ಇವರು ನಮ್ಮ ಅಂಗಡಿಗೆ ಬಂದಿದ್ದರು. ಅವರು ತಿನ್ನಲು ಪಾನ ಕೇಳಿದರು, ನಾನು ಕೊಟ್ಟೆನು. ಅವರು ಪಾನ್ ತಿನ್ನುತ್ತಾ ಕಾರಿನಲ್ಲಿ ಕುಳಿತರು, ನಾನು ಅವರನ್ನು ಹಣ ನೀಡುವಂತೆ ಕೇಳಿದೆನು. ಅಷ್ಟಕ್ಕೆ ಅವರು ನನಗೆ ಜಾತಿ ಹೆಸರು ಹಿಡಿದು, ನನಗೆ ಹಣ

ಕೇಳುತ್ತಿಯಾ ಎಂದು ಅವಾಚ್ಯವಾಗಿ ಬೈದ್ದು, ಸಂಜೆಗೆ ಬಂದು ನೋಡಿಕೊಳ್ಳುತ್ತೇನೆ ಎಂದು ಹೇಳಿ ಹೋದರು. ಆ ದಿನ ರಾತ್ರಿ ನಾನು ಮನೆಗೆ ಹೋಗಿ ಊಟ ಮಾಡಿ ಪುನಃ ಚಾಸಾಃ 4 ದಿಲಿಪ ಇವರ ಟೇಲರ ಅಂಗಡಿಗೆ ಬಂದು ನಾನು, ಚಾಸಾಃ 4 ದಿಲಿಪ, ಚಾಸಾಃ5 ಚನ್ನಪ್ಪ ಟೇಲರ ಇವರು ಅಂಗಡಿಯಲ್ಲಿ ಮಲಗಿಕೊಂಡೆವು.

4. ಅಣ್ಣಪ್ಪ ಹಳಿಜೋಳ ಮತ್ತು ಅವರ ಕುಟುಂಬದವರು ನಮ್ಮ ಮನೆಗೆ ಹೋಗಿ ನನ್ನ ಅಣ್ಣನ ಬಳಿ ನನ್ನ ಬಗ್ಗೆ ವಿಚಾರಿಸಿದ್ದಾರೆ ಎಂದು ನನ್ನ ಅಣ್ಣ ನನಗೆ ಹೇಳಿದನು. ಆಗ ಸಮಯ ರಾತ್ರಿ 10:30 ರಿಂದ 11:00 ಗಂಟೆ ಆಗಿತ್ತು. ಆ ಸಮಯದಲ್ಲಿ ಅಣ್ಣಪ್ಪ ಹಳಿಜೋಳ ಮತ್ತು ಅವರ ಗ್ಯಾಂಗದವರು ಟೇಲರ ಅಂಗಡಿಯ ಬಳಿ ಬಾಗಿಲು ಬಡಿಯುತ್ತಿದರು. ಚಾಸಾಃ 5 ಚನ್ನಪ್ಪ ಹೋಗಿ ಬಾಗಿಲು ತೆರೆದರು, ಆಗ ಅಂಗಡಿಯ ಒಳಗೆ ಆರೋಪಿತರು ನುಗ್ಗಿದ್ದರು. ಆರೋಪಿತರು ನನಗೆ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈಯಲು ಪ್ರಾರಂಭಿಸಿದರು ಮತ್ತು ನನಗೆ ಎಳೆದಾಡಿ ಹೊಡೆದರು. ಚನ್ನಪ್ಪ ಮತ್ತು ದಿಲಿಪ ನನಗೆ ಬಿಡಿಸಲು ಬಂದರು ಅವರಿಗೂ ಸಹ ಆರೋಪಿತರು ಏಳೆದಾಡಿ ಹೊಡೆಯಲು ಪ್ರಾರಂಭ ಮಾಡಿದರು. 1ನೇ ಆರೋಪಿ ಅಣ್ಣಪ್ಪ ಮತ್ತು 4ನೇ ಆರೋಪಿ ಸುರೇಶ ಇವರು ನನ್ನ ಕೈ ಹಿಡಿದು ಕುತ್ತಿಗೆ ಹಿಚುಕಿದರು. 6 ನೇ ಆರೋಪಿ ಸುಶೀಲಾ ಇವರು ಬಂದು ನನ್ನ ಗುಪ್ತಾಂಗನ ಹಿಡಿದು ಹಿಚುಕಿದರು. ನಾನು ಪ್ರಜ್ಞೆ ತಪ್ಪಿದೆನು. ಹೊರಗಡೆ ಓಡಾಡುತ್ತಿದ್ದ ಜನರು ಬಂದು ನನಗೆ ಬಿಡಿಸಿದರು. ಚಾಸಾಃ 6 ಫಿರೋಜ ಚೌಗುಲಾ ಮತ್ತು ಚಾಸಾಃ 7 ಭೈರಪ್ಪ ಇವರು ಬಂದು ಬಿಡಿಸಿದರು. ಜಗಳ ಬಿಡಿಸಿ, ಆರೋಪಿತರನ್ನು ಕಳುಹಿಸಿದರು. 2 – 3 ನಿಮೀಷಗಳ ನಂತರ ನನಗೆ ಪ್ರಜ್ಞೆ ಬಂತು. ಆ ದಿನ ನಾನು ದೂರನ್ನು ನೀಡಿರುವುದಿಲ್ಲ. ಮರು ದಿನ ಅಂದರೆ ದಿನಾಂಕಃ 02-10-2015 ರಂದು ನಾನು ಕುಡಚಿ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ದೂರನ್ನು ನಿಪಿ-5 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-5 [ಎ] ಎಂದು ಗುರುತಿಸಲಾಯಿತು.

5. ಘಟನೆ ನಂತರ ನಾನು ಕುಡಚಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ಆ ನಂತರ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ಪ್ರಥಮ ವರ್ತಮಾನ ವರದಿಯ ಮೇಲೆ ಇರುವ ತನ್ನ ಸಹಿ ಸಾಕ್ಷಿ ಗುರುತಿಸಿದ್ದಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ–6 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–6 [ಎ] ಎಂದು ಗುರುತಿಸಲಾಯಿತು.

6. ದೂರು ನೀಡಿದ ನಂತರ ಪೋಲಿಸರು ಬಂದಿದ್ದರು. ಪೋಲಿಸರಿಗೆ ನಮ್ಮ ಊರಿನ ಜನರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದಾರೆ. ನಾನು ಸಹ ಅಲ್ಲಿ ಹೋಗಿದ್ದೆನು. ನಾನು ಪೋಲಿಸರಿಗೆ ನನ್ನ ಪಾನ್ ಶಾಪ ಮತ್ತು ಟೇಲರ ಅಂಗಡಿಯನ್ನು ತೋರಿಸಿದ್ದೇನೆ. ಸಾಕ್ಷಿಯು ಮುಂದುವರೆದು ನಮ್ಮ ಊರಿನ ಹಿರಿಯರು ಪೋಲಿಸರಿಗೆ ಸ್ಥಳ ತೋರಿಸಿದ್ದರು ಎಂದು, ಹಿರಿಯರು ನನಗೆ ಪೋನ ಮಾಡಿದ್ದರು ಎಂದು, ನಾನು ಜಾಗ ತೋರಿಸಿ ವಾಪಸ್ಸು ಬಂದಿದ್ದೇನೆ ಎಂದು ಹೇಳಿದ್ದಾರೆ. ಡಿ. ವೈ. ಎಸ್.ಪಿ. ರವರು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ.

**ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 10-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ**

**ಶ್ರೀ.ಆರ್.ಸಿ.ಪಿ ವಕೀಲರಿಂದಃ**

7. ನಮ್ಮ ಮನೆಯ ಮುಂದೆ ಪೋದಾರ ಕ್ರಾಸ ಇರುತ್ತದೆ. ಪೋದಾರ ಕ್ರಾಸನಿಂದ ಆರ್ ಎಸ್ ಪಾಟೀಲ ಮೂಲೆಗೆ ನಡೆದುಕೊಂಡು ಹೋದರೆ 4 ನಿಮಿಷದಲ್ಲಿ ತಲುಪಬಹುದು. ಕೃತ್ಯ ನಡೆದ ಸ್ಥಳವು ಜನ ನಿಬಿಡ ಸ್ಥಳ ಎನ್ನುವುದು ಸರಿ. ಕೃತ್ಯ ನಡೆದ ಸ್ಥಳವು ಕೇಶವ ಮಾವರಕರ ಅವರ ಕಾಂಪ್ಲೇಕ್ಸನಲ್ಲಿ ಆಗಿರುತ್ತದೆ. ಕಾಂಪ್ಲೇಕ್ಸ ಪಕ್ಕದಲ್ಲಿ ಸುಕುಮಾರ ಮತ್ತು ಶ್ರವಣ ಕಾಂಬಳೆ ಅವರ ಮನೆ ಇರುತ್ತದೆ. ಸುಕುಮಾರ ರವರ ಮನೆಯ ಪಕ್ಕದಲ್ಲಿ ಒಂದು ಭಾಗದಲ್ಲಿ ನಮ್ಮ ಮನೆ ಇದೆ. ಮಾರುತಿ ಅಸೊದೆ ಅವರ ಪಾನ ಶಾಪ ಇದೆ, ಮತ್ತು ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ. ಕೃತ್ಯ ನಡೆದ ಕಾಂಪ್ಲೇಕ್ಸನ ಮುಂಭಾಗದಲ್ಲಿ ದುರ್ಗಾದೇವಿ ಗುಡಿ ಇದ್ದ ಅದರ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ. ದುರ್ಗಾದೇವಿ ಗುಡಿಯಿಂದ ಮನೆಗಳು ಆದ ನಂತರ ಲಾಲಸಾಬ ಗುಡಿ ಇದೆ ಎನ್ನುವುದು ಸರಿ. ಜಮೀರಸಾಬ ಅವರ ಮನೆ ನಮ್ಮ ಮನೆಯ ಹಿಂಭಾಗದಲ್ಲಿ ದೂರ ಇದೆ. ತಂಗವ್ವಾ ಅವರ ಮನೆ ಕೃತ್ಯ ನಡೆದ ಪಾನ ಶಾಪದಿಂದ ಬಹಳ ದೂರದಲ್ಲಿ ಇದೆ. ತಮ್ಮಣ್ಣ ಪಾಟೀಲ, ಶಂಭು ಪಾಟೀಲ ಅವರುಗಳ ಮನೆ ದೂರದಲ್ಲಿ ಇವೆ. ಚೌಗಲಾ ಅವರ ಅಂಗಡಿ ನಮ್ಮ ಪಾನ ಶಾಪ ಹತ್ತಿರದಲ್ಲಿ ಇದೆ. ಅನ್ವರ ನದಾಫ ಅವರ ಮನೆ ನಮ್ಮ ಪಾನಶಾಪ ಹಿಂದೆ ಇದೆ. ನನ್ನ ಪಾನ ಶಾಪ ಊರಿನ ಮಧ್ಯ ಭಾಗದಲ್ಲಿ ಇದೆ ಎನ್ನುವುದು ಸರಿ.

8. ನಮ್ಮ ಅಂಗಡಿಯ ಮುಂದೆ ಸಾಕಷ್ಟು ಜನರು ಓಡಾಡುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಶನಿವಾರದಂದು ಸಂತೆ ಇರುತ್ತದೆ ಆ ದಿನ ಮಾತ್ರ ನಮ್ಮ ಅಂಗಡಿ ಮುಂದೆ ಜನ ಇರುತ್ತಾರೆ ಎಂದು ಹೇಳಿದ್ದಾರೆ.

9. ಚಾಸಾ-6 ಫಿರೋಜ ಚೌಗಲಾ, ಚಾಸಾ-7 ಬೈರಪ್ಪಾ ಚೌಗಲಾ ಅಣ್ಣತಮ್ಮಂದಿರು ಎನ್ನುವುದು ಸರಿ. ರಾಜು ಚೌಗಲಾ ಎನ್ನುವವರು ಚಾಸಾ-6 ಮತ್ತು 7 ಬೈರಪ್ಪಾ ಅವರ ಚಿಕ್ಕಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಚಾಸಾ-6 ಮತ್ತು 7 ರವರ ಸಹೋದರ ಕೇದಾರ ಪಾರ್ಲೆಜಿ ಎಜೆಂಟ ಆಗಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೇದಾರ ಅವರ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. ಕೇದಾರಿ ಅವರ ಪಾರ್ಲೆಜಿ ವ್ಯವಹಾರವನ್ನು ಮೊದಲು ನಾನು ನೋಡಿಕೊಳ್ಳುತ್ತಿದ್ದೇನು. ಸಾಕ್ಷಿ ಮುಂದುವರೆದ ಬಳಹ ವರ್ಷಗಳ ಹಿಂದ 4-5 ಮಾತ್ರ ನೋಡಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಕೇದಾರಿ ಅವರ ನನಗೆ ಸಂಬಳ ಕೊಡುತ್ತಿದ್ದರು ಎಂದು ಹೇಳಿದ್ದಾರೆ.

10. 2011 ರ ಮೊದಲಿನಿಂದ ಇಲ್ಲಿಯ ವರೆಗೆ ನಾನು ಕೇದಾರಿ ಅವರ ಪಾರ್ಲೆಜಿ ವ್ಯವಹಾರವನ್ನು ನಾನೇ ನೋಡಿಕೊಳುತ್ತಿದ್ದೆ ಎನ್ನುವುದು ಸರಿಯಲ್ಲ. ಕೇದಾರಿ ಅವರ ಪಾರ್ಲೆಜಿ ವ್ಯವಹಾರ ಎಷ್ಟು ಹಳ್ಳಿಗಳಿಗೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಚಾಸಾ-6 ಮತ್ತು ಚಾಸಾ-7 ರವರು ಚೀಟಿ ವ್ಯವಹಾರ ನಡೆಸುವುದು ನನಗೆ ಗೊತ್ತಿಲ್ಲ.

11. 7 ನೇ ಆರೋಪಿ ಗೀರಿಜಾ ಅವರು ನಮ್ಮಾರಿನಲ್ಲಿ ಚುನಾವಣೆ ಸ್ಪರ್ಧಿಸಿದ್ದರು ಎನ್ನುವುದು ಸರಿ. ಆದರೆ ಯಾವ ವರ್ಷದ ಚುನಾವಣೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಯಾರು ಗೆದ್ದರು ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿ ಮೂಲತಃ ಸವಸುದ್ದಿ ಗ್ರಾಮದವರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿ ನಮ್ಮೂರಿನಲ್ಲಿ ಬಹಳ ಆಸ್ತಿ ಹೊಂದಿದ್ದಾರೆ, ಅವರಿಗೆ ಬಹಳ ವ್ಯವಹಾರ ಇದೆ ಕೋಟಿ ಗಟ್ಟಲೆ ವ್ಯವಹಾರ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

12. ದೂರು ನೀಡಲು 2 ನೇ ತಾರಿಖಿನಂದು ಸಂಜೆ 4.00 ಗಂಟೆಗೆ ನಾನು ಚನ್ನಪ್ಪ ಮತ್ತು ದೀಲಿಪ ಹೋಗಿದ್ದೇವು. ದೂರನ್ನು ಕುಡಚಿಯಲ್ಲಿ ನಾನು ಟೈಪ ಮಾಡಿಸಿದ್ದೇನೆ ಸಾಕ್ಷಿ ಮುಂದುವರೆದು ಪೋಲಿಸರು ಟೈಪ ಮಾಡಿಸಿಕೊಂಡು ಬರಲು ಹೇಳಿದ್ದರಿಂದ ನಾನು ಟೈಪ ಮಾಡಿಸಿ ಕೊಟ್ಟಿದ್ದೇನೆ.

13. ನಾನು ದೂರು ನೀಡುವ ಒಂದು ದಿನ ಮೊದಲು 2 ನೇ ಆರೋಪಿ ಚಾಸಾ-6 ಫಿರೋಜ ಚೌಗಲಾ ಮತ್ತು ಚಾಸಾ-7 ಬೈರಪ್ಪ ಚೌಗಲಾ ಅವರು ಕುಟುಂಬದ ವಿರುದ್ಧ ದೂರು ನೀಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಬೈರಪ್ಪ ಚೌಗಲಾ ಅವರ ತಮ್ಮ ಲಗಮಣ್ಣ ಚೌಗಲಾ ಅವರನ್ನ ನಾನು ನೋಡಿರುವುದಿಲ್ಲ, ಅವರು ತೀರಿಕೊಂಡ ವಿಚಾರವು ಸಹ ನನಗೆ ಗೊತ್ತಿರುವುದಿಲ್ಲ. ಆದರೆ ಶ್ರೀಮಂತ ಚೌಗಲಾ ಅವರನ್ನ ನೋಡಿದ್ದೇನೆ.

14. ನೀವು ದೂರಿನಲ್ಲಿ ವಕ್ಕಲುತನ ಎಂದು ಬರೆಸಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನಾನು ವಕ್ಕಲುತನವನ್ನು ಮಾಡುತ್ತೇನೆ ಮತ್ತು ಪಾನಶಾಪನ್ನು ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಪಾನಶಾಪ ನಡೆಸಲು ನಾನು ಲೈಸನ್ಸನ್ನು ಹೊಂದಿದ್ದೇನೆ. ನಾನು ಪಾನಶಾಪ ಹೊಂದಿಲ್ಲ ಎನ್ನುವುದು ಸರಿಯಲ್ಲ. ನಾನು ಪಾನಶಾಪ ನಡೆಸುವುದಿಲ್ಲ ಆ ಕಾರಣ ನಾನು ದೂರಿನಲ್ಲಿ ವಕ್ಕಲುತನ ಎಂದು ಬರೆಸಿದ್ದೇನೆ ಎನ್ನುವುದು ಸರಿಯಲ್ಲ.

15. ಆರೋಪಿತರ ಹೆಸರು ಮತ್ತು ವಿಳಾಸ ನನಗೆ ಗೊತ್ತಿರುತ್ತದೆ. 1 ನೇ ನಮ್ಮ ಅಂಗಡಿಗೆ ಪಾನ ತೆಗೆದುಕೊಳ್ಳುವ ಬಂದ ಸಮಯದಲ್ಲಿ ಸಾಕಷ್ಟು ಜನರು ನಮ್ಮ ಅಂಗಡಿಯ ಮುಂದೆ ಓಡಾಡುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಇಲ್ಲ ಎಂದು ಹೇಳಿದ್ದಾರೆ. 1 ನೇ ಆರೋಪಿ ನಮ್ಮ ಅಂಗಡಿಗೆ ತಂದಿದ್ದ ಕಾರ ಗಾಡಿ ನಂಬರ ನನಗೆ ಗೊತ್ತಿರುವುದಿಲ್ಲ. ನಾನು 1 ನೇ ಆರೋಪಿಗೆ ಸಾದಾ ಪಾನನ್ನು ನೀಡಿದ್ದೇನೆ. 11.00 ಗಂಟೆ ಸುಮಾರಿಗೆ ನಮ್ಮ ಅಂಗಡಿಯು ಮುಂದೆ ಇರುವ ಅಂಗಡಿಗಳು, ಮೇಡಿಕಲ್ ಶಾಪ ತೆರೆದಿದ್ದವು. ಚೌಗಲಾ ಅವರ ಅಂಗಡಿ ಸಹ ತೆಗೆದಿತ್ತು.

16. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ. 1 ನೇ ಆರೋಪಿ ನಮ್ಮ ಅಂಗಡಿಗೆ ಬಂದು ನನ್ನಿಂದ ಪಾನನ್ನು ತೆಗೆದುಕೊಂಡು ಅದಕ್ಕೆ ಹಣ ಕೊಡದೆ ಹೋಗಿದ್ದರು ಎಂದು, ನಾನು ಹಣ ಕೇಳಿದಾಗ ನನಗೆ ಜಾತಿ

ಹೆಸರು ಹಿಡಿದು ನನಗೆ ಬೈದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಂತಹ ಯಾವುದೇ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ.

17. ಅಣ್ಣಪ್ಪ ಹಳಿಜೋಳಿ ಮತ್ತು ಅವರ ಕುಟುಂಬದವರು ಬಂದು ಹಲ್ಲೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

18. 2016-17 ನೇ ಸಾಲಿನಲ್ಲಿ ನನ್ನ ಸಹೋದರ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದರು ಎನ್ನುವುದು ಸರಿಯಲ್ಲ, ಕಳೆದ ವರ್ಷ ಆಗಿದ್ದರು ಎಂದು ಹೇಳಿದ್ದಾರೆ. ಚಾಸಾ-3 ಮಹಾದೇವ ಅಸೊದೆ ನಮ್ಮೂರಿನ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು ಎನ್ನುವುದು ಸರಿ. ಚಾಸಾ-8 ದೀವಾಕರ ಅಸೊದೆ ನನ್ನ ಅಣ್ಣನಾಗಿದ್ದು ಅವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದಾರೆ ಎನ್ನುವುದು ಸರಿ. ಚಾಸಾ-3 ಮಹಾದೇವ ಅಸೊದೆ ಚಾಸಾ-6 ಫಿರೋಜ ಚೌಗಲಾ, ಚಾಸಾ-7 ಬೈರಪ್ಪ ಚೌಗಲಾ, ಚಾಸಾ-8 ದೀವಾಕರ ಅಸೊದೆ ಎಲ್ಲಾ ಒಂದೇ ಪೇನಲ್ ದವರು ಎನ್ನುವುದು ಸರಿಯಲ್ಲ.

19. 7 ನೇ ಆರೋಪಿ ಗೀರಿಜಾ ಅವರು ಚುನಾವಣೆಗೆ ಸ್ಪರ್ಧಿಸಿದ ವಿಚಾರದಲ್ಲಿ ಚಾಸಾ-6 ಮತ್ತು 7 ರವರಿಗೂ, ಹಳಿಜೋಳಿ ಕುಟುಂಬಕ್ಕೂ ವೈಶಮ್ಯ ಇತ್ತು ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿ ಚಾಸಾ-6 ಮತ್ತು 7 ರವರ ವಿರುದ್ಧ ದೂರಿನಲ್ಲಿ ರಾಜಿ ಮಾಡಿಸುವ ಸಲುವಾಗಿ ಅವರುಗಳು ನನ್ನ ಮುಖಾಂತರ ಈ ರೀತಿ ಸುಳ್ಳು ದೂರನ್ನು ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ.

20. ಆರೋಪಿತರೆಲ್ಲರೂ ಸೇರಿ ರಾತ್ರಿ ವೇಳೆಯಲ್ಲಿ ಬಂದು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಚಾಸಾ-6 ಮತ್ತು 7 ರವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಘಟನೆಯ ಸಮಯದಲ್ಲಿ ಕರೆಂಟ ಇತ್ತು. ನಾನು ದೂರು ನೀಡಲು ಮಾತ್ರ ಪೋಲಿಸ ಠಾಣೆಗೆ ಹೋಗಿದ್ದೇನು ಆನಂತರದಲ್ಲಿ ಹೋಗಿರುವುದಿಲ್ಲ.

21. ಆರೋಪಿತರೆಲ್ಲರೂ ಸೇರಿ ನಮ್ಮ ಮೇಲೆ ಹಲ್ಲೆ ಮಾಡುತ್ತಿದ್ದಾಗ ಚಾಸಾ-4 ದೀಲಿಪ ರವರು ನನ್ನನ್ನು ಬಿಡಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 6 ನೇ ಆರೋಪಿ ನನ್ನ ಗುಪ್ತಾಂಗ ಹಿಸುಕಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. ಕೃತ್ಯ ನಡೆದ ಸಮಯದಲ್ಲಿ ಫೀರೋಜ ಚೌಗಲಾ ಮತ್ತು ಬೈರಪ್ಪಾ ಚೌಗಲಾ ಮಾತ್ರ ಬಂದಿದ್ದರು ಬೇರೆ ಯಾರು ಬಂದಿರುವುದಿಲ್ಲ.

22. ಘಟನೆಯಾದ ಕೂಡಲೇ ಪೋಲಿಸ ಠಾಣೆಗೆ ಹೋಗಿ ದೂರ ನೀಡಲು ತೊಂದರೆ ಇರಲಿಲ್ಲ ಎನ್ನುವುದಕ್ಕೆ ಸಾಕ್ಷಿ ಆಗ ಕತ್ತಲಾಗಿತ್ತು ಎಂದು ಹೇಳಿದ್ದಾರೆ. ಆರೋಪಿತರು ಆ ದಿನ ಸಂಜೆ ವರೆಗೂ ಏನು ತೊಂದರೆ ಮಾಡಿರಲಿಲ್ಲ ಆದರೆ ಹಣ ಮಾತ್ರ ಕೊಟ್ಟಿರಲಿಲ್ಲ. ಕೃತ್ಯ ನಡೆದ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿದ್ದೇನೆ.

**<u>ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ</u>**

**<u>ಶ್ರೀ.ಯು.ಬಿ.ಜೆ ವಕೀಲರಿಂದಃ</u>**

23. ನಾನು ಪದವಿಧರನಿದ್ದೇನೆ. ಘಟನೆಯ ನಂತರ ಅಂದರೆ ಬೆಳಿಗ್ಗೆ 11.00 ಗಂಟೆಹೆ ಸಮಯದಲ್ಲಿ 1 ನೇ ಆರೋಪಿ ನನಗೆ ಜಾತಿ ಹೆಸರು ಹಿಡಿದು ಬೈದುರು, ಜೀವ ಬೆದರಿಕೆ ಹಾಕಿದರು ಎಂದು ನಾನು ಪೋಲಿಸರಿಗೆ ಪೋನ ಮುಖಾಂತರ ವಿಷಯ ತಿಳಿಸಿರುವುದಿಲ್ಲ. ಈ ವಿಚಾರವನ್ನು ನಾನು ನಮ್ಮ ಮನೆಯವರಿಗೂ ಸಹ ಹೇಳಿರುವುದಿಲ್ಲ. ಆ ರೀತಿ ಹೇಳಲು ನನಗೆ ಯಾವುದೆ ತೊಂದರೆ ಇರಲಿಲ್ಲ.

24. ನಾನು, ನನ್ನ ಅಣ್ಣ ತಮ್ಮಂದಿರು, ನನ್ನ ತಂದೆ ತಾಯಿ ಒಟ್ಟಿಗೆ ವಾಸ ಇದ್ದೇವೆ. ಘಟನಾ ಸಮಯದಲ್ಲಿ ನನಗೆ ವಿವಾಹ ಆಗಿತ್ತು, ಎಂದು ಹೇಳಿ ಸಾಕ್ಷಿ ಪುನಃ ವಿವಾಹ ಆಗಿರಲಿಲ್ಲ ಎಂದು ಹೇಳುತ್ತಾರೆ. ನಾನು ಯಾವಾಗಲೂ ಚಾಸಾ-4 ದೀಲಿಪ ಅಸೊದೆ ಅವರ ಅಂಗಡಿಯಲ್ಲಿ ಮಲಗಿಕೊಳ್ಳುತ್ತೇನೆ. ನಮ್ಮ ಅಣ್ಣ ನನಗೆ ಅಣ್ಣಪ್ಪ ಹುಡುಕಿಕೊಂಡು ಬಂದಿದ್ದಾನೆ ಎಂದು ಹೇಳಿದಾಗ ನನಗೆ ಭಯ ಆಗಿತ್ತು. ಆರೋಪಿತರು ಬಾಗಿಲು

ಬಡಿದಾಗ ಯಾರು ಎಂದು ಗೊತ್ತಿಲ್ಲದೆ ಚನ್ನಪ್ಪ ಬಾಗಿಲನ್ನು ತೆಗೆದಿದ್ದಾನೆ. ನಾನು ಅಣ್ಣಪ್ಪಅವರಿಗೆ ಒಂದು ಪಾನ ವಿಚಾರವಾಗಿ ನನ್ನನ್ನು ಏಕೆ ಹೊಡೆಯುತ್ತಿರಿ ಬಿಟ್ಟು ಹೋಗಿ ಎಂದು ಕೇಳಿರುವುದಿಲ್ಲ. ಈ ಘಟನೆಯ ಪೂರ್ವದಲ್ಲಿ ಆರೋಪಿತರಿಗೂ ನನಗೂ ಯಾವುದೇ ಜಗಳ ಆಗಿರುವುದಿಲ್ಲ. ಘಟನೆಗೂ ಪೂರ್ವದಲ್ಲಿ ಆರೋಪಿತರು ಎದುರಿಗೆ ಸಿಕ್ಕಿದಾಗ ನಮಸ್ಕಾರ ಎಂದು ಹೇಳುತ್ತಿದ್ದೇವು ಹೆಚ್ಚು ಮಾತನಾಡುತ್ತಿರಲಿಲ್ಲ. ನಮಗೂ ಆರೋಪಿತರಿಗೂ ಕೊಡುವ ತೆಗೆದುಕೊಳ್ಳುವ ವ್ಯವಹಾರ ಇರಲಿಲ್ಲ.

25. ಚಾಸಾ–6 ಮತ್ತು 7 ರವರಿಗೆ ನಾನು ಚೆನ್ನಾಗಿ ವಿಶ್ವಾಸದಿಂದ ಇದ್ದೇನೆ ಎನ್ನುವುದು ಸರಿ. ಅವರು ನನಗೆ ಸಹಾಯ ಮಾಡುತ್ತಾರೆ ಮತ್ತು ನಾನು ಅವರಿಗೆ ಸಹಾಯ ಮಾಡುತ್ತೇನೆ ಎನ್ನುವುದು ಸರಿ. ಚಾಸಾ–6 ಮತ್ತು 7 ರವರ ಸಹಾಯ ನನ್ನ ಮೇಲೆ ಹೆಚ್ಚಿಗೆ ಇದೆ ಎನ್ನುವುದು ಸರಿಯಲ್ಲ. ನಾನು ಚಾಸಾ–6 ಮತ್ತು 7 ಮತ್ತು ಪೋಲಿಸರು ಸೇರಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿದ್ದೇವೆ ಎನ್ನುವುದು ಸರಿಯಲ್ಲ.

26. ರಾತ್ರಿ ವೇಳೆಯಲ್ಲಿ ನಾನು ಮತ್ತು ಚಾಸಾ–4 ದೀಲಿಪ ಚಾಸಾ–5 ಚನ್ನಪ್ಪ ಅವರುಗಳೆಲ್ಲ ಸೇರಿ ಇಸ್ಪಿಟ ಆಡುತ್ತಿದ್ದೇವು ಎಂದು ಪೋಲಿಸರಿಗೆ ಮಾಹಿತಿ ಹೋಗಿತ್ತು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಆ ರೀತಿ ಆಡುವುದಿಲ್ಲ ಎಂದು ಹೇಳಿದ್ದಾರೆ.

27. ಅಣ್ಣಪ್ಪ ಮತ್ತು ಅವರ ಗ್ಯಾಂಗ ನವರು ರಾತ್ರಿ ವೇಳೆಯಲ್ಲಿ ಬಂದು ನನ್ನ ಮೇಲೆ ಹಲ್ಲೆ ಮಾಡಿದರು ಎಂದು ನಾನು ದೂರಿನಲ್ಲಿ ಬರೆಸಿದ್ದೇನೆ. 1 ಮತ್ತು 4 ನೇ ಆರೋಪಿತರು ನನ್ನ ಕೈ ಹಿಡಿದು ಕುತ್ತಿಗೆ ಹಿಸುಕಿದರು ಎಂದು ದೂರಿನಲ್ಲಿ ಬರೆಸಿಲ್ಲ ಎನ್ನುವುದು ಸರಿಯಲ್ಲ. 2–3 ನಿಮಿಷ ಪಜ್ಞೆ ಹೊಯಿತು ಎಂದು ದೂರಿನಲ್ಲಿ ಬರೆಸಿಲ್ಲ ಎನ್ನುವುದು ಸರಿಯಲ್ಲ.

28. ನಾನು ದೂರು ನೀಡಲು ಹೋದಾಗ ಬೀಟ ಪೋಲಿಸರು ಠಾಣೆಯಲ್ಲಿ ಇದ್ದರು. ನಾನು ಡಿ ವೈ ಎಸ್ ಪಿ ಅವರ ಮುಂದೆ ನೀಡಿದ ಹೇಳಿಕೆಯಲ್ಲಿ ಅಣ್ಣಪ್ಪ ಮತ್ತು ಸುರೇಶ ಅವರು ಸೇರಿ ಸುರೇಶ ಇವನ ಟವೇಲನ್ನು ನನ್ನ ಕುತ್ತಿಗೆಗೆ ಸುತ್ತಿ ಜಗ್ಗಿರುತ್ತಾರೆ ಅಂತಾ ಅಣ್ಣಪ್ಪ ಹಳಿಜೋಳ ಮತ್ತು ಅವರ ಮನೆಯವರ ಮೇಲಿನ ಸಿಟ್ಟಿನಿಂದ ಆ ರೀತಿ ಪಿರ್ಯಾದಿ ಕೊಟ್ಟಿರುತ್ತೇನೆ ಎನ್ನುವುದಕ್ಕೆ ಸಾಕ್ಷಿ ಅವರು ಜಗ್ಗಿದು ನಿಜ ಅದಕ್ಕೆ ಆ ರೀತಿ ಹೇಳಿದ್ದೇನೆ.

29. ನಾನು ಮೊದಲು ಪೋಲಿಸ ಠಾಣೆಗೆ ಹೋಗಿದ್ದು, ಅವರು ಮೊದಲು ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರುವಂತೆ ಹೇಳಿದ್ದರಿಂದ,ನಾನು ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದು ನಂತರ ದೂರನ್ನು ನೀಡಿದ್ದೇನೆ. ನಾನು 2 ನೇ ಸಂಜೆ 4.30 ಸಮಯಕ್ಕೆ ಆಸ್ಪತ್ರೆಗೆ ಹೋಗಿದ್ದೇನು. ಆಸ್ಪತ್ರೆಯಲ್ಲಿ ವೈದ್ಯರು ನಮ್ಮನ್ನು ಪರೀಕ್ಷೆ ಮಾಡಿ ವಾಪಸು ಕಳಿಸಿದ್ದಾರೆ. ನಂತರ ನಾನು ಪೋಲಿಸ ಠಾಣೆಗೆ ಸಂಜೆ 7.00 ಗಂಟೆಗೆ ಹೋಗಿದ್ದೇನೆ. ಸುಮಾರು ಒಂದು ಗಂಟೆಗಳ ವರೆಗೆ ಪೋಲಿಸ ಠಾಣೆಯಲ್ಲಿ ಇದ್ದೇವು. ಆ ಸಮಯದಲ್ಲಿ ಠಾಣೆಯಲ್ಲಿ 3-4 ಜನ ಪೋಲಿಸರು ಇದ್ದರು.

30. ಸರಕಾರದಿಂದ ನನಗೆ ಪರಿಹಾರದ ಹಣ ಬಂದಿಲ್ಲ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ರವರ ಪರವಾಗಿ ಎಮ್.ಎಮ್.ಬಿ ವಕೀಲರಿಂದಃ**

ಶ್ರೀ.ಆರ್.ಸಿ.ಪಿ. ವಕೀಲರು ಮತ್ತು ಯು.ಜಿ.ಬಿ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.